ಅಭಿಯಾನ ನಿರ್ದೇಶಕರ ಕಚೇರಿ
ರಾಷ್ಟ್ರೀಯ ನಗರ ಜೀವನೋಪಾಯ
ಅಭಿಯಾನ

ಕರ್ನಾಟಕ ಸರ್ಕಾರ

ಇ-ಮೇಲ್: daynulm@gmail.com
ಫೋನ್ ನಂ.080-25599993
ನಂ.11, ಕೊಠಡಿ ನಂ.305, 3ನೇ ಮಹಡಿ,
ಬ್ಲ್ಯೂ ಕ್ರಾಸ್ ಛೇಂಬರ್ಸ್ ಕಟ್ಟಡ,
ಇನ್‌ಫ್ಯಾಂಟ್ರಿ ಅಡ್ಡರಸ್ತೆ, ಬೆಂಗಳೂರು-560 001.

ನಂ. ಅನಿಕ 260 (4) ಡೇ-ನಲ್ಮ್ 2019-20 ದಿನಾಂಕ: 18.02.2020.

ರವರಿಗೆ,

ಜಿಲ್ಲಾಧಿಕಾರಿ,
ಜಿಲ್ಲಾಧಿಕಾರಿಗಳ ಕಾರ್ಯಾಲಯ,
ತುಮಕೂರು ಜಿಲ್ಲೆ.

ಮಾನ್ಯರೇ,

ವಿಷಯ: 2019-20ನೇ ಸಾಲಿನಲ್ಲಿ ದೀನದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ-ನಲ್ಮ್) ಯೋಜನೆಯ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ ಉಪಘಟಕದಡಿ M/S. The Rastriya Computers Saksharatha Samithi ಸಂಸ್ಥೆಯ ಮೂಲಕ ತರಬೇತಿಯನ್ನು ಆಯೋಜಿಸುವ ಕುರಿತು.

ಉಲ್ಲೇಖ:
1) ಈ ಕಾರ್ಯಾಲಯದ ಪತ್ರ ಸಂ: ಅನಿ ಆಉ&ಜೀ 144 ಡೇ-ನಲ್ಮ್ 2019-20 ದಿನಾಂಕ: 04.10.2019.
2) ಈ ಕಾರ್ಯಾಲಯದ ಅಧಿಸೂಚನೆ ಸಂಖ್ಯೆ:MD 260 DAY-NULM 2019-20 Dated: 20.12.2019.
3) ಈ ಕಚೇರಿಯ ಆದೇಶ ಸಂ: ಅನಿ ಆಉ&ಜೀ 260 ಡೇ-ನಲ್ಮ್ 2019-20 ದಿನಾಂಕ: 20.12.2019.
4) M/S. The Rastriya Computers Saksharatha Samithi ರವರ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಕಾಲೋಚಿತಗೊಳಿಸಿರುವ ಬಿಡ್ ಸಂ: B-3661444.

---*/*/*---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19 ಮತ್ತು 2019-20ನೇ ಸಾಲಿನಲ್ಲಿ ಡೇ-ನಲ್ಮ್ ಯೋಜನೆಯ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ ಉಪಘಟಕದಡಿ ಪುರಸಭೆ, ಪಾವಗಡಕ್ಕೆ ಉಲ್ಲೇಖ(1)ರನ್ವಯ 2019-20ನೇ ಸಾಲಿಗೆ 38 ಭೌತಿಕ ಗುರಿಯನ್ನು ನಿಗದಿಪಡಿಸಿ ತಿಳಿಸಲಾಗಿರುತ್ತದೆ. ಈ ಪೈಕಿ 19 ಗುರಿಯನ್ನು ಈ ಸಂಸ್ಥೆಗೆ ನಿಗದಿಪಡಿಸುತ್ತಾ, ಉಲ್ಲೇಖ(2)ರನ್ವಯ CMKKY Accredited Skill Training providers/Centers ನ್ನು Empanelment ಮಾಡಿಕೊಳ್ಳುವ ಸಂಬಂಧ ಅರ್ಹ ಸಂಸ್ಥೆಗಳಿಂದ ಈ ಕಾರ್ಯಾಲಯದಿಂದ Expression of Interest ಆಹ್ವಾನಿಸಲಾಗಿದ್ದು, ಉಲ್ಲೇಖ(3)ರನ್ವಯ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಅದರಂತೆ, ಉಲ್ಲೇಖ(4)ರನ್ವಯ M/S. The Rastriya Computers Saksharatha Samithi ರವರು Expression of Interest ನಲ್ಲಿ ಭಾಗವಹಿಸಿ, ಟೆಂಡರ್‌ನ ನಿಯಮದಂತೆ ಅರ್ಹತೆಯನ್ನು ಹೊಂದಿರುತ್ತಾರೆ. ಆದ್ದರಿಂದ ಪುರಸಭೆ, ಪಾವಗಡ ವ್ಯಾಪ್ತಿಯಲ್ಲಿ 2019-20ನೇ ಸಾಲಿಗೆ ಸಂಬಂಧಿಸಿದಂತೆ ಅನುಬಂಧ-1ರಲ್ಲಿ ಲಗತ್ತಿಸಿರುವ ತರಬೇತಿ ವಿಷಯವನ್ನು M/S. The Rastriya Computers Saksharatha Samithi ರವರ ಮೂಲಕ ಆಯೋಜಿಸಿ, ಯಶಸ್ವಿಗೊಳಿಸುವಂತೆ ಕೋರಲಾಗಿದೆ.

---2

Scanned with CamScanner

**ತರಬೇತಿಗಳನ್ನು ಆಯೋಜಿಸುವಾಗ ಅನುಸರಿಸಬೇಕಾದ ನಿಯಮಗಳು**

1. ಸದರಿ ಸಂಸ್ಥೆಯು ತರಬೇತಿ ಕೇಂದ್ರವನ್ನು ಹೊಂದಿರುವ ಬಗ್ಗೆ, ತರಬೇತಿಯನ್ನು ನೀಡಲು ಮೂಲಭೂತ ಸೌಲಭ್ಯವನ್ನು ಹೊಂದಿರುವ ಬಗ್ಗೆ ಹಾಗೂ ಡೇ-ನಲ್ಮ್ ಯೋಜನೆಯ ತರಬೇತಿ ನಡೆಯುವಾಗ ಬೇರೊಂದು ಇಲಾಖೆಯ ತರಬೇತಿ ಕಾರ್ಯಕ್ರಮಗಳು ನಡೆಯದೆ ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
2. ಫಲಾನುಭವಿಗಳನ್ನು ಗುರುತಿಸುವಾಗ ತರಬೇತಿ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಯ ಸಿಬ್ಬಂದಿ ಸಂಬಂಧಪಟ್ಟ ತರಬೇತಿ ಶಾಖೆಗಳೊಂದಿಗೆ ಮಾರ್ಗದರ್ಶನ ಸಭೆಯನ್ನು ಆಯೋಜಿಸುವ ಮೂಲಕ ಫಲಾನುಭವಿಗಳನ್ನು ಗುರುತಿಸಲು ಕ್ರಮ ಕೈಗೊಳ್ಳುವುದು.
3. ತರಬೇತಿ ಸಂಸ್ಥೆಗೆ ಅಭ್ಯರ್ಥಿಗಳನ್ನು ನಿಯೋಜಿಸುವಾಗ ತರಬೇತಿ ವಿಷಯವಾರು ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳ ಸಮುದಾಯ ಸಂಘಟನಾಧಿಕಾರಿ / ಸಮುದಾಯ ಸಂಘಟಕರು ದೃಢೀಕರಿಸುವುದು.
4. Kaushalkar.com ನಲ್ಲಿ ನೋಂದಾಯಿಸಲ್ಪಟ್ಟ ಫಲಾನುಭವಿಗಳನ್ನು ಸಹ ಆದ್ಯತೆಯ ಮೇರೆಗೆ ತರಬೇತಿಯನ್ನು ನೀಡಲು ಪರಿಗಣಿಸುವುದು. ಒಂದು ವೇಳೆ ಫಲಾನುಭವಿಗಳು Kaushalkar.com ನಲ್ಲಿ ನೋಂದಣಿಯಾಗದಿದಲ್ಲಿ ಅಂತಹ ಫಲಾನುಭವಿಗಳನ್ನು Kaushalkar.com ನಲ್ಲಿ ನೋಂದಾಯಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
5. ನಿರ್ದೇಶಕರು, ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ರವರ ಪತ್ರ ಸಂಖ್ಯೆ:F.No.K-14014/3/2015-UPA/FTS-12523, Dated: 18.02.2016 ರನ್ವಯ ತರಬೇತಿ ಸಂಸ್ಥೆಯವರು ಅಭ್ಯರ್ಥಿಗಳಿಗೆ ತರಬೇತಿ ವಿಷಯದ ಪಠ್ಯಕ್ರಮದ ಜೊತೆಗೆ ಮುಖ್ಯವಾಗಿ, Computer literacy, language and work place inter-personal skills relevant for the sector bar trade, financial literacy (savings, credit, subsidy, remittance, insurance, pension, other NULM components and other Central / State scheme for social benefits and poverty alleviation ಇವುಗಳ ಬಗ್ಗೆ Soft skills ತರಬೇತಿಯನ್ನು ನೀಡುವುದು.
6. ತರಬೇತಿಯನ್ನು ಪಡೆದುಕೊಳ್ಳುವ ಅಭ್ಯರ್ಥಿಗಳ ಮತ್ತು ತರಬೇತುದಾರರ ಆಧಾರ್ ಸಂಖ್ಯೆಯೊಂದಿಗೆ ಲಿಂಕ್ ಮಾಡುವುದು. ಒಂದು ವೇಳೆ ಅಭ್ಯರ್ಥಿಗಳಿಗೆ ಆಧಾರ್ ಸಂಖ್ಯೆ ಇಲ್ಲದೇ ಇದ್ದಲ್ಲಿ ಅಭ್ಯರ್ಥಿಗಳ ತರಬೇತಿಗೆ ಸೇರಿಸಿಕೊಂಡು ತರಬೇತಿಯ ಅವಧಿಯಲ್ಲಿ ಆಧಾರ್ ಸಂಖ್ಯೆ ಪಡೆಯಲು ಕ್ರಮ ಕೈಗೊಳ್ಳುವುದು.
7. ಪ್ರತಿ ತರಬೇತಿ ವಿಷಯಕ್ಕೆ ನಿಗದಿಪಡಿಸಿದ ತರಬೇತಿ ಶುಲ್ಕವು ಅಭ್ಯರ್ಥಿಗಳ ಕ್ರೋಢೀಕರಣ, Post placement tracking and monitoring, ಪಠ್ಯಕ್ರಮ, ಉದ್ಯೋಗನಿಯುಕ್ತಿಗೆ ತಗಲುವ ವೆಚ್ಚ, ತರಬೇತುದಾರರ ತರಬೇತಿ ವೆಚ್ಚ, ಸಾಧನ-ಸಲಕರಣೆಗಳು, ಮೂಲಸೌಕರ್ಯ ವೆಚ್ಚಗಳು/ ಉಪಯುಕ್ತತೆಗಳ ಭೋಗ್ಯ (Amortization of infrastructure cost / utilities), ಬೋಧನಾ ಸಲಕರಣೆಗಳು, ಕಚ್ಚಾ ಸಾಮಗ್ರಿಗಳು ಮತ್ತು ತರಬೇತುದಾರರ ವೇತನವನ್ನು ಒಳಗೊಂಡಿರುತ್ತದೆ.
8. ಪ್ರತಿ ತರಬೇತಿ ವಿಷಯಕ್ಕೆ ನಿಗದಿಪಡಿಸಿದ ತರಬೇತಿ ಅವಧಿಯು, Theory, Practical, Entrepreneurship & Soft skills and Digital literacy ಅಂಶಗಳನ್ನು ಒಳಗೊಂಡಿರುತ್ತದೆ.
9. ತರಬೇತಿ ಕೇಂದ್ರದಲ್ಲಿ M/S. The Rastriya Computers Saksharatha Samithi ರವರು **ಅಭ್ಯರ್ಥಿಗಳ ಹಾಜರಾತಿಗೆ ಬಯೋಮೆಟ್ರಿಕ್ ಸಾಧನವನ್ನು ಹಾಗೂ ಸಿ.ಸಿ ಕ್ಯಾಮೆರಾ ವನ್ನು ಕಡ್ಡಾಯವಾಗಿ ಅಳವಡಿಸುವುದು.**
10. ತರಬೇತಿ ಕಾರ್ಯಕ್ರಮಗಳ ಕುರಿತು **ಮಾಹಿತಿಯನ್ನು ಕಾಲಕಾಲಕ್ಕೆ ಡೇ-ನಲ್ಮ್ ಯೋಜನೆಯ ಎಂ.ಐ.ಎಸ್ ನಲ್ಲಿ ತಪ್ಪದೇ ಕಡ್ಡಾಯವಾಗಿ ಕಾಲೋಚಿತಗೊಳಿಸುವುದು.**
11. ತರಬೇತಿ ಕೇಂದ್ರದಲ್ಲಿ ತರಬೇತಿಯ ವಿಷಯವಾರು Syllabus, training manual, trainers guide, trainer qualification, assessment & testing guidelines ಇತ್ಯಾದಿ ಅಂಶಗಳ ಬಗ್ಗೆ ಮಾಹಿತಿಯನ್ನು ತರಬೇತಿ ಕೇಂದ್ರದಲ್ಲಿಡುವುದು ಹಾಗೂ ಒಂದು ಪ್ರತಿಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸುವುದು.

Scanned with CamScanner

12. ಅನುಬಂಧ-2 ರಲ್ಲಿ ತಿಳಿಸಿರುವ ತರಬೇತಿ ಕೇಂದ್ರದಲ್ಲಿ ತರಬೇತಿಯನ್ನು ಆಯೋಜಿಸುವುದು. ಹಾಗೂ ತರಬೇತಿ ವಿಷಯ ಮತ್ತು ಗುರಿಗಳಿಗನುಗುಣವಾಗಿ ಮಾತ್ರ ತರಬೇತಿಯನ್ನು ಆಯೋಜಿಸುವುದು. ಯಾವುದೇ ತರಬೇತಿ ವಿಷಯದ ಬದಲಾವಣೆ / ಗುರಿ ಹೆಚ್ಚಿಸುವಿಕೆ ಮಾಡಿಕೊಳ್ಳತಕ್ಕದಲ್ಲ.
13. ಸದರಿ ಸಂಸ್ಥೆಯೊಂದಿಗೆ ಈ ಕಾರ್ಯಾಲಯದಿಂದ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗುವುದು ಹಾಗೂ ಒಡಂಬಡಿಕೆಯ ಪ್ರತಿಯನ್ನು ಸಂಬಂಧಪಟ್ಟ ಜಿಲ್ಲೆಗೆ ಸಲ್ಲಿಸಲಾಗುವುದು.
14. ತರಬೇತಿ ಅವಧಿಯಲ್ಲಿ ತರಬೇತಿಯ ಗುಣಮಟ್ಟ ಪರೀಕ್ಷಿಸುವುದು, ತರಬೇತಿಗೆ ಅಭ್ಯರ್ಥಿಗಳು ಕಡ್ಡಾಯವಾಗಿ ಹಾಜರಾಗುವಂತೆ ನೋಡಿಕೊಳ್ಳುವುದು ಹಾಗೂ ಸಂಬಂಧಿಸಿದಂತೆ ಈ ಕಚೇರಿಗೆ ವರದಿಯನ್ನು ಕಾಲಕಾಲಕ್ಕೆ ಸಲ್ಲಿಸುವುದು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ / ಸಂಬಂಧಪಟ್ಟ ನಗರ ಸ್ಥಳಿಯ ಸಂಸ್ಥೆಯ ಸಮುದಾಯ ಸಂಘಟನಾಧಿಕಾರಿ / ಸಮುದಾಯ ಸಂಘಟಕರು / ಅಭಿಯಾನ ವ್ಯವಸ್ಥಾಪಕರ ಜವಾಬ್ದಾರಿಯಾಗಿರುತ್ತದೆ.
15. ತರಬೇತಿ ಸಂಸ್ಥೆಯವರು ತರಬೇತಿ ವಿಷಯವಾರು ಕಲಿಕಾ ಸಾಮಗ್ರಿಗಳನ್ನು (Study Materials) ವಿತರಿಸಿರುವ ಬಗ್ಗೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಸಮುದಾಯ ಸಂಘಟನಾಧಿಕಾರಿ / ಸಮುದಾಯ ಸಂಘಟಕರು / ಅಭಿಯಾನ ವ್ಯವಸ್ಥಾಪಕರು ಖಾತ್ರಿಪಡಿಸಿಕೊಳ್ಳುವುದು.
16. ಪ್ರತಿ ಮಾಹೆ ಸದರಿ ತರಬೇತಿ ಸಂಸ್ಥೆಯೊಂದಿಗೆ ಹಾಗೂ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳೊಂದಿಗೆ ಸಂಯೋಜನೆಯನ್ನು ಮಾಡಿಕೊಂಡು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಪ್ರಗತಿ ಪರಿಶೀಲನೆಯನ್ನು ಕೈಗೊಳ್ಳುವುದು ಹಾಗೂ ತರಬೇತಿಯ ಅವಧಿಯಲ್ಲಿ ಕಂಡುಬರುವ ಯಾವುದೇ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ವಹಿಸುವುದು. ಸಭಾ ನಡವಳಿಯ ಪ್ರತಿಯನ್ನು ಈ ಕಚೇರಿಗೆ ಸಲ್ಲಿಸುವುದು.
17. ಉಳಿದಂತೆ ಕೇಂದ್ರ ಸರ್ಕಾರದವರು ಯೋಜನೆಗೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಹೊರಡಿಸುವ ನಿಯಮ / ಅಂಶಗಳು ಹಾಗೂ ಒಡಂಬಡಿಕೆ ಹಾಗೂ ಟೆಂಡರ್‌ನಲ್ಲಿ ಸೂಚಿಸಲಾದ ಅಂಶಗಳು ಸಹ ಅನ್ವಯವಾಗುತ್ತವೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅಧೀನ ಕಚೇರಿಗಳ ಅಧಿಕಾರಿಗಳಿಗೆ ತಿಳಿಸಿ, ಯೋಜನೆಯನ್ನು ಯಶಸ್ವಿಗೊಳಿಸುವಂತೆ ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಅಭಿಯಾನ ನಿರ್ದೇಶಕರು,
ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ
ಬೆಂಗಳೂರು.

**ಪ್ರತಿಯನ್ನು:-**

1) ಸರ್ಕಾರದ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ, ಬೆಂಗಳೂರು.
2) ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಕೌಶಲ್ಯ ಮಿಷನ್, ತುಮಕೂರು ಜಿಲ್ಲೆಯ - ಅಗತ್ಯ ಕ್ರಮಕ್ಕಾಗಿ.
3) ಮುಖ್ಯಾಧಿಕಾರಿ, ಪುರಸಭೆ, ಪಾವಗಡ ರವರ - ಅಗತ್ಯ ಕ್ರಮಕ್ಕಾಗಿ.
4) ಮುಖ್ಯಸ್ಥರು, M/S. The Rastriya Computers Saksharatha Samithi ಸಂಸ್ಥೆ, ಅಗತ್ಯ ಕ್ರಮಕ್ಕಾಗಿ.
5) ಕಚೇರಿ ಪ್ರತಿ.

Scanned with CamScanner

ಅಭಿಯಾನ ನಿರ್ದೇಶಕರ ಕಚೇರಿ
ರಾಷ್ಟ್ರೀಯ ನಗರ ಜೀವನೋಪಾಯ
ಅಭಿಯಾನ

ಕರ್ನಾಟಕ ಸರ್ಕಾರ

ಇ-ಮೇಲ್: daynulm@gmail.com
ಫೋನ್ ಸಂ.080-25599993
ನಂ.11, ಕೊಠಡಿ ಸಂ.305, 3ನೇ ಮಹಡಿ,
ಬ್ಲೂ ಕ್ರಾಸ್ ಛೇಂಬರ್ಸ್ ಕಟ್ಟಡ,
ಇನ್‌ಫ್ಯಾಂಟ್ರಿ ಅಡ್ಡರಸ್ತೆ, ಬೆಂಗಳೂರು-560 001.

ನಂ. ಅನಿಕ 260(4) ಡೇ-ನಲ್ಮ್ 2019-20 ದಿನಾಂಕ: 18.02.2020.

:: **ಕಾರ್ಯಾದೇಶ** ::

ವಿಷಯ: 2019-20ನೇ ಸಾಲಿನಲ್ಲಿ ದೀನದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ-ನಲ್ಮ್) ಯೋಜನೆಯ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ ಉಪಘಟಕದಡಿ M/S. The Rastriya Computers Saksharatha Samithi ಸಂಸ್ಥೆಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ಕಾರ್ಯಾದೇಶ ನೀಡುವ ಕುರಿತು.

ಉಲ್ಲೇಖ:
1) ಈ ಕಾರ್ಯಾಲಯದ ಪತ್ರ ಸಂ: ಅನಿ ಆಉ&ಜೀ 144 ಡೇ-ನಲ್ಮ್ 2019-20 ದಿನಾಂಕ: 04.10.2019.
2) ಈ ಕಾರ್ಯಾಲಯದ ಅಧಿಸೂಚನೆ ಸಂಖ್ಯೆ:MD 260 DAY-NULM 2019-20 Dated: 20.12.2019.
3) ಈ ಕಚೇರಿಯ ಆದೇಶ ಸಂ: ಅನಿ ಆಉ&ಜೀ 260 ಡೇ-ನಲ್ಮ್ 2019-20 ದಿನಾಂಕ: 20.12.2019.
4) M/S. The Rastriya Computers Saksharatha Samithi ರವರ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಕಾಲೋಚಿತಗೊಳಿಸಿರುವ ಬಿಡ್ ಸಂ: B-3661444.

---*/*/*---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19 ಮತ್ತು 2019-20ನೇ ಸಾಲಿನಲ್ಲಿ ಡೇ-ನಲ್ಮ್ ಯೋಜನೆಯ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ ಉಪಘಟಕದಡಿ ಪುರಸಭೆ, ಪಾವಗಡಕ್ಕೆ ಉಲ್ಲೇಖ(1)ರನ್ವಯ 2019-20ನೇ ಸಾಲಿಗೆ 38 ಭೌತಿಕ ಗುರಿಯನ್ನು ನಿಗದಿಪಡಿಸಿ ತಿಳಿಸಲಾಗಿರುತ್ತದೆ. ಈ ಪೈಕಿ 19 ಗುರಿಯನ್ನು ಸದರಿ ಸಂಸ್ಥೆಗೆ ನಿಗದಿಪಡಿಸುತ್ತಾ, ಉಲ್ಲೇಖ(2)ರನ್ವಯ CMKKY Accredited Skill Training providers/Centers ನ್ನು Empanelment ಮಾಡಿಕೊಳ್ಳುವ ಸಂಬಂಧ ಅರ್ಹ ಸಂಸ್ಥೆಗಳಿಂದ ಈ ಕಾರ್ಯಾಲಯದಿಂದ Expression of Interest ಆಹ್ವಾನಿಸಲಾಗಿದ್ದು, ಉಲ್ಲೇಖ(3)ರನ್ವಯ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಅದರಂತೆ, ಉಲ್ಲೇಖ(4)ರನ್ವಯ M/S. The Rastriya Computers Saksharatha Samithi ರವರು Expression of Interest ನಲ್ಲಿ ಭಾಗವಹಿಸಿ, ನಿಗದಿಪಡಿಸಿದ ಮಾನದಂಡದಂತೆ ಅರ್ಹತೆಯನ್ನು ಹೊಂದಿರುತ್ತಾರೆ. ಆದ್ದರಿಂದ ಈ ಕೆಳಕಂಡ ತರಬೇತಿ ವಿಷಯವನ್ನು ಪುರಸಭೆ, ಪಾವಗಡ ನಗರ ಸ್ಥಳೀಯ ಸಂಸ್ಥೆಯಲ್ಲಿ ಆಯೋಜಿಸುವಂತೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

| Sl. No. | Name of the Sector | Name of the QP | Duration (Hrs.) | Per head training cost (in Rs.) | Allocated Target |
|---|---|---|---|---|---|
| 1 | IT-ITES | Domestic Data entry Operator | 440 | 17635 | 19 |

ಲಾಯಿತ್ರ3 (signature)

---2

ಮೇಲ್ಕಂಡ ತರಬೇತಿ ವಿಷಯಗಳನ್ನು ಆಯೋಜಿಸುವಂತೆ ಹಾಗೂ ಈ ಕಾರ್ಯಾದೇಶ ತಲುಪಿದ 07 (ಏಳು) ದಿನಗಳೊಳಗಾಗಿ ರೂ.100.00 ಮೌಲ್ಯದ ಇ-ಸ್ಟಾಂಪ್ ಪೇಪರ್‌ನಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡು, ಒಡಂಬಡಿಕೆಯಲ್ಲಿ ಒಪ್ಪಲಾದ ನಿಯಮಗಳನ್ವಯ ತರಬೇತಿಯನ್ನು ಆಯೋಜಿಸುವಂತೆ ಕಾರ್ಯಾದೇಶವನ್ನು ನೀಡಿ ಆದೇಶಿಸಿದೆ.

ಅಭಿಯಾನ ನಿರ್ದೇಶಕರು,
ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ
ಬೆಂಗಳೂರು.

ಇವರಿಗೆ,

M/S.Rastriya Computer Saksharatha Samithi,
Venkateshwara Building,
Nisarga Daba Road,
Near New Bus Stand,
Pavagad.

Scanned with CamScanner

## M/S. The Rastriya Computers Saksharatha Samithi

**No: MD 260 (2) DAY-NULM 2019-20 Dated: 18 .02.2020**

## Annexure-I

| Sl no | Sector | Name of the QP | QPRef.ID | Educational Qualification | Category as per common Norms | Perhour Training cost | Duration of Training | | | | | | | |
|---|---|---|---|---|---|---|---|---|---|---|---|---|---|---|
| | | | | | | | Theory (hours) for Compulsory NOSs | Practical(hours) for Compulsory NOSs | Total Hours for Compulsory NOSs | Addetional Duration Entreprenuership and Soft skills | Addetional duration Degital Literacy | Total Duration of Training | Perhead Training cost | Allocated target |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| 1 | IT-ITES | Domestic Data entry Operator | SSC/Q2212 | 10th Class | II | 40.08 | 100 | 300 | 400 | 40 | 20 | 440 | 17635.2 | 19 |

ಸೂಚನೆ: ನೀಡಲಾದ 19 ಗುರಿಯ ಪೈಕಿ 03 ಅಭ್ಯರ್ಥಿಗಳು ಪರಿಶಿಷ್ಟ ಜಾತಿ, 01 ಅಭ್ಯರ್ಥಿಗಳು ಪರಿಶಿಷ್ಟ ಪಂಗಡ, 04 ಅಭ್ಯರ್ಥಿಗಳು ಇತರೆ ವರ್ಗ, 03 ಅಭ್ಯರ್ಥಿಗಳು ಅಲ್ಪ ಸಂಖ್ಯಾತರು, 06 ಅಭ್ಯರ್ಥಿಗಳು ಮಹಿಳೆಯರು ಮತ್ತು 01 ಅಭ್ಯರ್ಥಿಗಳು ವಿಶೇಷ ಚೇತನರಾಗಿರಬೇಕು.

Mission Director (DAY-NULM)
National Urban Livelihood Mission
Bengaluru.

Scanned with CamScanner

ಅನುಬಂಧ–2

## M/S.Rastriya Computer Saksharatha Samithi

| Sl No | Name of District | Name of the ULB | Address |
|---|---|---|---|
| 1 | Tumkur | TMC Pavagada | M/S.Rastriya Computer Saksharatha Samithi,<br>Venkateshwara Building,<br>Nisarga Daba Road,<br>Near New Bus Stand,<br>Pavagad. |

Mission Director,
National Urban Livelihood Mission,
Bengaluru.

Scanned with CamScanner